# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಶಿವಾಜಿನಗರ ಉಪವಿಭಾಗ ಹಲಸೂರು ಕೆರೆರಸ್ತೆ, ಬೆಂಗಳೂರು-೪೨**

ಸಂಖ್ಯೆ:ಸ.ಇಂ/ವಾ-೯೨/ವಾರ್ಡ್‌ಸಭೆ/೮೦/೨೦೨೨-೨೩ ದಿನಾಂಕ:೦೩-೦೯-೨೦೨೨

## ವಾರ್ಡ್-೯೨ ರ ವಾರ್ಡ್ ಸಭೆಯ ನಡವಳಿ

ದಿನಾಂಕ: ೦೩-೦೯-೨೦೨೨ ರಂದು ಶಿವಾಜಿನಗರ ಉಪ ವಿಭಾಗ ವಾರ್ಡ್-೯೨-ಶಿವಾಜಿನಗರ ವಾರ್ಡ್ ಕಛೇರಿಯಲ್ಲಿ ಶ್ರೀ.ಡಿ.ಮೂರ್ತಿ. ಸಹಾಯಕ ಕಾರ್ಯಪಾಲಕ ಅಭಿಯಂತರರು (ಮೊಹ್ಯಲೂರು ಉಪ ವಿಭಾಗ) ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ.ಡಿ.ಮೂರ್ತಿ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಮೊಹ್ಯಲೂರು ಉಪ ವಿಭಾಗ) ನೋಡೆಲ್ ಅಧಿಕಾರಿ |
| 2 | ಶ್ರೀಮತಿ ಡಾ॥ ಶ್ರೀದೇವಿ | ಪ್ರಾಥಮಿಕ ಆರೋಗ್ಯ ಕೇಂದ್ರ (ಶಿವಾಜಿನಗರ) |
| 3 | ಶ್ರೀ ಹೆಚ್.ಎಂ ರಂಗನಾಥ್. | ಸ ಅ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಂಖ್ಯೆ:೯೨ |
| 4 | ಶ್ರೀ ಅಭಿಷೇಕ್ | ಸಕಾನಿಅ(ಘ.ತ್ಯಾ.ನಿ) ಶಿವಾಜಿನಗರ ವಿಭಾಗ(ಪ್ರಭಾರ) |
| 5 | ಶ್ರೀ.ವಿ.ವೆಂಕಟೇಶ್. | ಹಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ.ರಾಜೇಶ್. | ಸ.ಅ(ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 7 | ಶ್ರೀ.ಕವಿತಾ.ಎಸ್ | ತೋಟಗಾರಿಕೆ ನಿರೀಕ್ಷಕರು ವಾರ್ಡ್ ಸಂ:೯೨ |
| 8 | ಶ್ರೀ ತ್ಯಾಗರಾಜ್. | ಕಂದಾಯ ಪರಿವೀಕ್ಷಕರು |

**ಮಾನ್ಯ ನೋಡೆಲ್ ಅಧಿಕಾರಿರವರು ಸ್ವಾಗತದೊಂದಿಗೆ ಅಧಿಕಾರಿಗಳ / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.**

- *ನೋಡೆಲ್ ಅಧಿಕಾರಿರವರು ಮಾತನಾಡುತ್ತ ಶಿವಾಜಿನಗರ ಚರ್ಚ್‌ನ ಸೆಂಟ್ ಮೇರಿಸ್ ಬೆಸಿಲಿಕ್ ವಾರ್ಷಿಕ ಫೆಸ್ಟಿವಲ್ ಶಿವಾಜಿನಗರ ಹಬ್ಬನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸ್ವಚ್ಛತೆಯನ್ನು ಕಾಪಾಡಲು ಮತ್ತು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.*

*ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ಶಿವಾಜಿನಗರ)*

- *ವಾರ್ಡಿನಲ್ಲಿ ತಳ್ಳುವ ಗಾಡಿಗಳ ಕೊರತೆ ಇದ್ದು, ಸರಿಯಾಗಿ ಕಸ ವಿಲೇವಾರಿಯಾಗುತ್ತಿಲ್ಲದಿರುವುದು ಕಂಡು ಬಂದಿದ್ದು ಇದರ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರು ಬಂದಿರುತ್ತದೆ ಹಾಗೂ ಪೌರಕಾರ್ಮಿಕರನ್ನು ವಿಚಾರಿಸಿದ್ದಲ್ಲಿ ಅವರಿಗೆ ತಳ್ಳುವ ಗಾಡಿ (Push Cart) ಕೊರತೆ ಇದ್ದು ಆದಷ್ಟು ಬೇಗ ಇವರಿಗೆ ತಳ್ಳುವ ಗಾಡಿ (Push Cart) ನೀಡಲು ಸೂಚಿಸಿದೆ.*

*ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ಶಿವಾಜಿನಗರ)*

- *ನೋಡೆಲ್ ಅಧಿಕಾರಿರವರು ಮಾತನಾಡುತ್ತ ಸಾರ್ವಜನಿಕರಿಂದ ಹಲವಾರು ಕಡೆ ಬೀದಿಗಳಲ್ಲಿ LED LIGHT WORK ಆಗದೇ ಇರುವುದು ಕಂಡುಬಂದಿದ್ದು ಇದರ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.*

*ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ಪೂರ್ವ)*

- *ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಆಶ ಕಾರ್ಯಕರ್ತರು ಮತ್ತು ಆರೋಗ್ಯ ಇಲಾಖೆರವರು ಮಾತನಾಡುತ್ತ ಪ್ರಸ್ತುತ*

(ಪುಟ-೨ಕ್ಕೆ)

- ಇರುವ BBMP Health Office, Quadrant Circle, ವ್ಯಾಪ್ತಿಯಲ್ಲಿ ಬಿಬಿಎಂಪಿ ಆರೋಗ್ಯ ಕಟ್ಟಡವು ತುಂಬ ಹಳೆಯದಾಗಿದ್ದು ಶಿಥಿಲಾಗೊಂಡಿರುತ್ತದೆ ಮತ್ತು ಶೌಚಾಲಯದ ವ್ಯವಸ್ಥೆ ಕೂಡ ಸರಿ ಇರುವುದಿಲ್ಲ ಆದುದರಿಂದ ಇದನ್ನು ಸರಿಪಡಿಸಲು Renovation ಕಾಮಗಾರಿಯನ್ನು ಕೈಗೊಳ್ಳಲು ಕೋರಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ ಉಪ ವಿಭಾಗ)

- ಹಾಜರಿದ್ದ ಕಂದಾಯ ಪರಿವೀಕ್ಷಕರು ಗುರುತಿನ ಚೀಟಿಗಳನ್ನು (Voter List) ಪರಿಶೀಲನೆಗಳನ್ನು ಮಾಡಿ ಏನಾದರೂ ತಪ್ಪಿದ್ದಲ್ಲಿ ಸರಿಪಡಿಸಲು ತಿಳಿಸಿರುತ್ತಾರೆ ಮತ್ತು ಸಾರ್ವಜನಿಕರಿಗೆ ಗುರುತಿನ ಚೀಟಿಗಳನ್ನು (Voter List) ಗಳನ್ನು ಆಪ್‌ನ ಮೂಲಕ ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಲು ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿ (ಶಿವಾಜಿನಗರ)

- ವಾರ್ಡ್‌ಗಳಲ್ಲಿ ಪೌರಕಾರ್ಮಿಕರು ಕೆಲಸ ಕಾರ್ಯಗಳನ್ನು ನಿರ್ವಹಿಸುವಾಗ ಹ್ಯಾಂಡ್ ಗ್ಲೌಸ್ ಮತ್ತು ಮಾಸ್ಕ್‌ಗಳನ್ನು ಹಾಕಿಕೊಳ್ಳಲು ಸಾರ್ವಜನಿಕರಿಂದ ದೂರುಬಂದಿದ್ದು ಸಂಬಂಧಪಟ್ಟ ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್‌ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ಶಿವಾಜಿನಗರ)

- ಬ್ರಾಡ್ ವೇ ರಸ್ತೆಯನ್ನು ನವೀಕರಿಸುತ್ತಿದ್ದು ಸಾರ್ವಜನಿಕರಿಂದ ಕಾಮಗಾರಿಯ ಬಗ್ಗೆ ದೂರು ಬಂದಿರುವುದರಿಂದ ಸಂಬಂಧಪಟ್ಟ ಇನ್‌ಫ್ರಾ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲು ತಿಳಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು (ಸ್ಮಾರ್ಟ್ ಸಿಟಿ)

- ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ವಿವಿಧ ಯೋಜನೆಗಳಿಗೆ ಪಾಲಿಕೆಯಲ್ಲಿರುವ ಅರ್ಜಿಗಳಿಗೆ ವಾರ್ಡ್‌ಕಮಿಟಿ ಅನೂಮೋದನೆ ಬಗ್ಗೆ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಇಬ್ಬರು ಮಕ್ಕಳಿಗೆ ಫೀಸ್ ಮತ್ತು ಇಬ್ಬರು ಅಂಗವಿಕಲರಿಗೆ (Physical handicap), 2+2 ವಾಹನವನ್ನು ನೀಡಲು ಅರ್ಜಿ ಸಲ್ಲಿಸಿದ್ದು, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರವರು ತಿಳಿಸಿರುತ್ತಾರೆ.

ಸ.ಕ.ಅ (ಕಲ್ಯಾಣ ಪೂರ್ವ)

- ಬಿಡಬ್ಲ್ಯೂಎಸ್‌ಎಸ್‌ಬಿ ಯಿಂದ ಸುಲ್ತಾನ್ ಗುಂಟ ಮುಖ್ಯ ರಸ್ತೆ, ಯು.ಜಿ.ಡಿ ಲೈನ್ ಹಾಕುತ್ತಿದ್ದು, ಸದರಿ ಮುಖ್ಯ ರಸ್ತೆಯಲ್ಲಿ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರು ಸಂಚಾರಕ್ಕೆ ತೊಂದರೆಯಾಗುತ್ತಿದ್ದು ಮತ್ತು ಅಗೆದ ಮಣ್ಣು ರಸ್ತೆ ಪಕ್ಕದ ಚರಂಡಿಗೆ ಬಿದ್ದು ನೀರು ಸರಾಗವಾಗಿ ಹೊಗದೆ ಚರಂಡಿಯಲ್ಲಿ ನೀರು ನಿಂತು ವಾಸನೆಯಿಂದ ಕೂಡಿದ್ದು ಮತ್ತು ಇದರಿಂದ ಸೊಳ್ಳೆಗಳು ಹೆಚ್ಚಾಗುತ್ತಿರುವುದಾಗಿ ಸಾರ್ವಜನಿಕರಿಂದ ಈ ಹಿಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ದೂರು ಬಂದಿದ್ದು, ಈ ಬಗ್ಗೆ ಸದರಿರವರಿಗೆ ತಿಳಿಸಿದ್ದರ ಮೇರೆಗೆ ಸದರಿರವರು ಕಾಮಗಾರಿ ಅನುಷ್ಠಾನವನ್ನು ಕೈಗೊಂಡಿರುತ್ತಾರೆಂದು ಸಹಾಯಕ ಅಭಿಯಂತರರು ಶಿವಾಜಿನಗರ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ.

- ವಾರ್ಡ್ ಸಂ-92 ನೆಹರೂಪುರಂನಲ್ಲಿ ಚರಂಡಿ ಮತ್ತು ಡೆಕ್ ಸ್ಲ್ಯಾಬ್ ಬ್ಲಾಕ್ ಆಗಿ ರಸ್ತೆಗೆ ಚರಂಡಿ ನೀರು ಹರಿಯುತ್ತಿರುವ ಬಗ್ಗೆ ಸಾರ್ವಜನಿಕರು ಮತ್ತು ವಾಹನ ಸಾವರರಿಗೆ ತೊಂದರೆಯಾಗುತ್ತಿರುವುದು ಕಂಡುಬಂದಿದ್ದು ತುರ್ತಾಗಿ ಮುಂದಿನ ಕ್ರಮ ಜರುಗಿಸಲು ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿರವರು ಸೂಚಿಸಿದ್ದ ಮೇರೆಗೆ ಚರಂಡಿಯಲ್ಲಿ ತುಂಬಿದ್ದ ಹೂಳನ್ನು ತೆಗೆದು ನೀರು ಸರಾಗವಾಗಿ ಹರಿಯುವಂತೆ ಕಾಮಗಾರಿಯನ್ನು ಕೈಗೊಂಡಿರುವುದಾಗಿ ಸಹಾಯಕ ಅಭಿಯಂತರರು ಶಿವಾಜಿನಗರ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ.

(ಪುಟ 3 ಕ್ಕೆ)

- ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು ಹಾಗು ಹಾಜರಿದ್ದ ಸಾರ್ವಜನಿಕರಿಗೆ ಕಸ ವಿಲೇವಾರಿ ಬಗ್ಗೆ ಆದಷ್ಟು ಗಮನವಹಿಸಿ ಸಹಕರಿಸಿದಲ್ಲಿ ದಿನನಿತ್ಯದ ಕಸ ವಿಲೇವಾರಿ ಸಮಯದಲ್ಲಿ ಸಮರ್ಪಕವಾಗಿ ನಿರ್ವಹಿಸಲು ಗುತ್ತಿಗೆದಾರರು ಸಹಾಯವಾಗುತ್ತದೆ.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸುತ್ತಾ ಸಾರ್ವಜನಿಕರಲ್ಲಿ ಗುರುತಿನ ಚೀಟಿಗಳನ್ನು (Voter List) ಗಳನ್ನು ಆಪ್‌ನ ಮೂಲಕ ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಲು ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿರವರ ಸೂಚನೆಗಳಂತೆ ನಡವಳಿಗಳನ್ನು ತಯಾರಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿರುತ್ತಾರೆ.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂ:92 ಶಿವಾಜಿನಗರ,

ಪ್ರತಿಯನ್ನು:

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಉಪ ಆಯುಕ್ತರು(ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ವಿಭಾಗ ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.